# ❋ ಮೌನದಲ್ಲಿ ಅರಳಿದ ಜ್ಞಾನಕುಸುಮ ❋

**ಸ್ವಾಮಿ ತಪಸ್ಯಾನಂದ**

ಭಾರತದ ಪ್ರಸಿದ್ಧ ಸಂತರಲ್ಲಿ ಒಬ್ಬರಾದ ರಮಣಮಹರ್ಷಿಗಳ ಸತ್ಸಂಗದಲ್ಲಿ ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರೂ, ಹಿರಿಯ ವಿದ್ವಾಂಸರೂ ಆಗಿದ್ದ ಸ್ವಾಮಿ ತಪಸ್ಯಾನಂದಜಿಯವರು ಮೂರು ದಿನಗಳನ್ನು ಕಳೆದಿದ್ದರು. ಆಗ ತಮ್ಮಲ್ಲಿ ಮೂಡಿದ್ದ ಭಾವನೆಗಳನ್ನು, ಮಹರ್ಷಿಗಳ ಬಗೆಗಿನ ತಮ್ಮ ಪ್ರಾಮಾಣಿಕ ಅನಿಸಿಕೆಗಳನ್ನು ಒಂದು ಪತ್ರಮುಖೇನ ತಿಳಿಸಿದ್ದು, ಆ ಪತ್ರದ ಆಯ್ದ ಕೆಲವು ಭಾಗಗಳು *ವೇದಾಂತ ಕೇಸರಿ* ಎಂಬ ಆಂಗ್ಲ ಮಾಸ ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದವು. ಪ್ರಸಕ್ತ ಲೇಖನವು ಅದರ ಕನ್ನಡ ಅನುವಾದವಾಗಿದೆ. ಅನುವಾದಕರು: ಶ್ರೀ ವಿಜಯಕುಮಾರ.

ಶ್ರೀರಮಣ ಮಹರ್ಷಿಗಳು ಅಪೂರ್ವ ಎನ್ನಬಹುದಾದ ವ್ಯಕ್ತಿಗಳ ಗುಂಪಿಗೆ ಸೇರಿದ ವ್ಯಕ್ತಿಯಾಗಿ ನನ್ನ ಮನದಾಳದಲ್ಲಿ ಛಾಪನ್ನು ಮೂಡಿಸಿದ್ದಾರೆ. ಅವರು ಜ್ಞಾನಿಯೋ ಅಥವಾ ಮತ್ತೇನೋ ಎಂಬುದು ನನಗೆ ತಿಳಿದಿಲ್ಲ. ಕಾರಣ, ವೇದಾಂತದ ಪ್ರಕಾರ ಜ್ಞಾನಿಯು ಮಾತ್ರ ಮತ್ತೊಬ್ಬ ಜ್ಞಾನಿಯನ್ನು ಗುರುತಿಸ ಬಲ್ಲ. ನಾನಂತೂ ಖಂಡಿತ ಜ್ಞಾನಿಯಲ್ಲ. ಆದರೆ ಈ ಮಹರ್ಷಿ ಸಾಧಾರಣ ವ್ಯಕ್ತಿಯಂತೂ ಅಲ್ಲ ಎಂಬುದು ಅವರನ್ನು ನೋಡಿದ ಯಾರ ಅನುಭವಕ್ಕಾದರೂ ಬರುತ್ತದೆ. ಇಂದಿನ ದಿನಗಳಲ್ಲಿ 'ಲೋಕೋದ್ಧಾರ' ಅಥವಾ ಅಂಥ ದೇನೋ ತಮ್ಮ ಗುರಿ ಎಂದು ಹೇಳಿಕೊಳ್ಳುವವರು ಎಲ್ಲೆಲ್ಲಿಯೂ ಕಾಣಸಿಗುತ್ತಾರೆ. ಆದರೆ ಇಂತಹ ಯಾವ ಭಾವನೆಯೂ ಇಲ್ಲದ ಈ ಮಹರ್ಷಿ ತಮ್ಮ ನಡತೆಯಲ್ಲಿ, ಚಲನವಲನಗಳಲ್ಲಿ 'ಪರಿಪೂರ್ಣ ಪ್ರಜ್ಞೆಯೇ' ತಾವಾಗಿದ್ದರು. ಈ ಪ್ರಪಂಚದ ಸುಖದ ಮೊತ್ತಕ್ಕೆ ತಾವು ಸೇರಿಸುವಂಥದೇನೂ ಇಲ್ಲ ಎಂಬ ಅಭಿಪ್ರಾಯ ಅವರಲ್ಲಿ ಎದ್ದುಕಾಣುತ್ತಿತ್ತು. ಯಾವ ಕಾತರತೆ ಯಾಗಲಿ, ಆಸೆ ನಿರೀಕ್ಷೆಯಾಗಲಿ ಇಲ್ಲದೆ ಕೇವಲ ತಮ್ಮ 'ಇರವಿನಲ್ಲೇ' ಸಂತೃಪ್ತಿಯನ್ನು ಕಂಡುಕೊಂಡ ಚೇತನ ಅದು. ಅವರು ಯಾವುದರ ಬಗ್ಗೆಯೂ ವಿಹ್ವಲರಾಗಿದ್ದನ್ನು ನಾನು ಕಾಣಲಿಲ್ಲ. ಸಂಪೂರ್ಣ ನಿರ್ಲಿಪ್ತತೆಯ ಆಕಾರದಂತಿದ್ದ ಅವರನ್ನು ನೋಡುತ್ತಿದ್ದಂತೆ 'ಉದಾಸೀನವತ್' ಎಂದು ಮೊದಲಾಗುವ ಭಗವದ್ಗೀತೆಯ ಶ್ಲೋಕ ಮತ್ತೆ ಮತ್ತೆ ತೀವ್ರವಾಗಿ ನನ್ನ ನೆನಪಿಗೆ ಬರುತ್ತಿತ್ತು. ತಮ್ಮ ಸುತ್ತ ಎದ್ದಿದ್ದ ಆಶ್ರಮದ ಬಗ್ಗೆಯೂ ಅವರಿಗೆ ಯಾವುದೇ ಆಸಕ್ತಿ ಇರಲಿಲ್ಲ. ಯಾವುದೇ ಧಾವಂತವಿಲ್ಲದೆ ಆಶ್ರಮದಲ್ಲಿ ಸುಮ್ಮನೆ ಇರುತ್ತಿದ್ದರು ಅಷ್ಟೆ. ಅಲ್ಲಿ ನಡೆಯುತ್ತಿದ್ದುದೆಲ್ಲಾ ಅವರ ಪಾಲಿಗೆ ಆಶ್ರಮದಲ್ಲಿನ ಇತರರು ರೂಪುಕೊಡುತ್ತಿದ್ದ ಕೇವಲ ಘಟನಾವಳಿಗಳು ಅಷ್ಟೆ. ಆಶ್ರಮದ ಚಟುವಟಿಕೆಗಳಲ್ಲಿ ಅವರು ಆಸಕ್ತರಾಗಿದ್ದಂತೆ ತೋರು ತ್ತಿದ್ದ ಒಂದೇ ಒಂದು ಚಟುವಟಿಕೆಯೆಂದರೆ—ಅಡುಗೆ ಮಾಡು ವುದು. ಅಡುಗೆ ಮನೆಯಲ್ಲಿ ತರಕಾರಿ ಹೆಚ್ಚುತ್ತಿದ್ದರು. ಒಂದು ವೇಳೆ ಎಂದಾದರೂ ವಿಶೇಷವಿದ್ದರೆ, ವ್ಯಂಜನಗಳ ತಯಾರಿಕೆ ಯಲ್ಲಿ ತಮ್ಮ ಪಾಕ ಕೌಶಲವನ್ನು ತೋರುತ್ತಿದ್ದರು. ಮಸಾಲೆ ಅರೆಯುವುದು, ಒಗ್ಗರಣೆ ಮುಂತಾದ ಪ್ರಕ್ರಿಯೆಗಳೆಲ್ಲಾ ಅವರ ನಿರ್ದೇಶನದಲ್ಲೇ ನಡೆಯುತ್ತಿದ್ದವು.

ಮಹರ್ಷಿಗಳಲ್ಲಿ ನನ್ನನ್ನು ತಟ್ಟಿದ ಮತ್ತೊಂದು ಅಂಶ ವೆಂದರೆ ಅವರ ಮೌನ. ವಿದೇಶಗಳಿಗೆ ತೆರಳುವ ನಮ್ಮ ಮಹಾ ಪಂಡಿತರೆಲ್ಲ ತಮ್ಮ ವೇದಾಂತದ ಪ್ರವಚನಗಳನ್ನು ಮೌನ ಮಾಧ್ಯಮದ ಮೂಲಕ ಏಕೆ ನೀಡಲಾರದವರಾಗಿದ್ದಾರೆ ಎಂದು ನಮ್ಮಲ್ಲೇ ನಾವು ವಿನೋದವಾಗಿ ಆಡಿಕೊಳ್ಳುತ್ತಿದ್ದೆವು. ಆದರೆ ಮಹರ್ಷಿಗಳ ಮಟ್ಟಿಗಂತೂ ಅದು ವಾಸ್ತವ ಎನ್ನದೆ ವಿಧಿಯಿಲ್ಲ. ಕಾರಣ ಅವರು ವೇದಾಂತದ ಉಪದೇಶವನ್ನು ನೀಡುತ್ತಿದ್ದುದೇ ತಮ್ಮ ಮೌನದಿಂದ. ಅಧ್ಯಾತ್ಮದ ಬಗ್ಗೆ ಏನಾದರೂ ಹೇಳಿರೆಂದು ಅವರನ್ನು ನಾನು ಕೇಳಿಕೊಂಡಾಗ ಅವರು ಹೇಳಿದ ಮೊದಲ ಮಾತೇ, "ಮೌನವೇ ಅತ್ಯಂತ ಶ್ರೇಷ್ಠವಾದ ಉಪದೇಶ!" ಎಂದು. ತಮ್ಮ ಈ ಉಪದೇಶದಲ್ಲಿ ಅವರಿಗಿದ್ದ ಆಳವಾದ ಶ್ರದ್ಧೆ ಹಾಗೂ ಪ್ರಾಮಾಣಿಕತೆ ಅವರಲ್ಲಿ ಕಂಗೊಳಿಸುತ್ತಿತ್ತು. ಅವರ ಅಭಿಪ್ರಾಯದಲ್ಲಿ, ಅದ್ವೈತಿ ಯಾದವನಿಗೆ ಯಾವ ಸಿದ್ಧಾಂತದ ಪ್ರತಿಪಾದನೆಯ ಅಗತ್ಯವೂ ಇಲ್ಲ, ಯಾವ ನಿಲುವನ್ನೂ ಅವನು ಸಮರ್ಥಿಸಿಕೊಳ್ಳ ಬೇಕಾಗಿಲ್ಲ. ಅದ್ವೈತವೆಂಬುದು ಯಾವುದೇ ವಾದವಿವಾದ ಗಳಿಂದ ಮಂಡಿಸಬೇಕಾದ ಒಂದು ನಿಲುವಲ್ಲದಿದ್ದರೂ ಇಂದಿನ ದಿನಗಳಲ್ಲಿ ಅದೊಂದು ಸಿದ್ಧಾಂತವಾಗಿ ಪ್ರತಿಪಾದಿತ ವಾಗುತ್ತಿರುವುದರ ಬಗ್ಗೆ ತಮ್ಮ ವಿಷಾದವನ್ನು ವ್ಯಕ್ತಪಡಿಸು ತ್ತಿದ್ದರು. ಹಾಗಾದರೆ ಇಷ್ಟೊಂದು ಅಗಾಧ ಪ್ರಮಾಣದ ವೇದಾಂತ ಸಾಹಿತ್ಯರಾಶಿಗೆ ಕಾರಣ? ಅದೇನಿದ್ದರೂ ಸಂದೇಹ ನಿವಾರಣೆಗಾಗಿ ಅಷ್ಟೆ. ನಮ್ಮ ತಾರ್ಕಿಕ ಬುದ್ಧಿ ಚುರುಕಾಗಿ ಸಂದೇಹಗಳು ಎದ್ದಾಗ ಅವುಗಳನ್ನು ನಿವಾರಿಸಿಕೊಳ್ಳಲು ವೇದಾಂತ ಸಾಹಿತ್ಯವು ನೆರವಾಗಬಲ್ಲದು. ಬೇರೆ ಮಾತಿನಲ್ಲಿ ಹೇಳಬೇಕೆಂದರೆ, ತನ್ನಲ್ಲಿ ಅಥವಾ ಇತರರಲ್ಲಿ ಏಳುವ ಸಂದೇಹಗಳ ನಿವಾರಣೆಗಾಗಿ ಅಷ್ಟೆ ಅದ್ವೈತಿ ಮಾತನಾಡುತ್ತಾನೆ. ಈ ವಿಚಾರಸರಣಿಗೆ ನಮ್ಮ ಮಹರ್ಷಿಯಲ್ಲಿದ್ದ ಬದ್ಧತೆ ಗಮನಾರ್ಹ. ಅವರು ಹೆಚ್ಚು ಮೌನದಲ್ಲೇ ಇರುತ್ತಾರೆ, ಯಾವುದಾದರೂ ವಿಷಯ ಕುರಿತು ಕೇಳಿದಾಗ ಮಾತ್ರವೇ

ಸ್ವಲ್ಪ ಮಾತನಾಡುತ್ತಾರೆ. ಇತರೆ ವಿಷಯಗಳ ಬಗ್ಗೆಯೂ ಆಗಾಗ ಮಾತನಾಡುವುದೂ ಉಂಟು. ಅಷ್ಟೇಕೆ, ಹಾಸ್ಯಲಹರಿಯನ್ನೂ ಹರಿಸಬಲ್ಲರು. ಆದರೆ ಮತೀಯ ಬಣ್ಣದ ಯಾವುದೇ ಬೋಧನೆ ಅಥವಾ ವೇದಾಂತದ ಪ್ರವಚನಗಳನ್ನು ಅವರು ನೀಡುತ್ತಿರಲಿಲ್ಲ. ಅದ್ವೈತವನ್ನು ಅರ್ಥೈಸುವ ಪ್ರತಿಯೊಬ್ಬರಿಗೂ ತಾವು 'ಹೌದು, ಹೌದು' ಎನ್ನುವುದಲ್ಲದೆ ತಾವಾಡಿದ ಮಾತುಗಳನ್ನು ಅರ್ಥೈಸಿ ಅದನ್ನು ತಮ್ಮ ಹೆಸರಿನಲ್ಲಿ ಪುಸ್ತಕರೂಪದಲ್ಲಿ ಪ್ರಕಟಿಸುವ ತಮ್ಮ ನಿಕಟವರ್ತಿಗಳಿಗೂ ತಾವು ಹಾಗೆಯೇ ಹೇಳುವುದಾಗಿ ಅವರು ನನಗೆ ತಿಳಿಸಿದರು. ಆಗ ನಾನು, ಅಲ್ಲಿನ ಪುಸ್ತಕ ಮಾರಾಟ ಮಳಿಗೆಯಲ್ಲಿ ಕೊಂಡ ಒಂದು ಪುಸ್ತಕವನ್ನು ಕುರಿತು, ಅದರಲ್ಲಿನ ವಿಚಾರಗಳು ಎಷ್ಟರಮಟ್ಟಿಗೆ ತಮ್ಮ ಉಪದೇಶಗಳಾಗಿವೆ ಎಂದು ಕೇಳಿದಾಗ, ಅದನ್ನು ಹೇಳುವುದು ಕಷ್ಟ ಎಂದರು. ಕಾರಣ, ಇದಮಿತ್ಥಂ ಎಂದು ನಿಖರವಾಗಿ ಹೇಳಬಹುದಾದ ಯಾವುದೇ ತಮ್ಮ ಉಪದೇಶ ಇಲ್ಲವೆಂದರು. ಮಹರ್ಷಿಗಳ ಉಪದೇಶವನ್ನು ಸಾಧಕ ತನ್ನ ಮನೋಧರ್ಮಕ್ಕೆ ತಕ್ಕಂತೆ ಅರ್ಥೈಸುವುದರಿಂದ, ಎಲ್ಲರಿಗೂ ಒಂದೇ ರೀತಿಯ ಉಪದೇಶವಿರಲು ಸಾಧ್ಯವಿಲ್ಲ. ಅವರು ಹೇಳುವುದನ್ನು ಜನ ತಾವು ಅರ್ಥ ಮಾಡಿಕೊಂಡಂತೆ ಬರೆದಿರುವುದರಿಂದ, ಕೆಲವು ದೃಷ್ಟಿಕೋನಗಳಿಂದ ಅವು ಸರಿ ಎನ್ನಿಸಬಹುದು. ತಾವೇ ಒಂದು ಪುಸ್ತಕ ಬರೆಯಬೇಕೆಂಬುದರ ಬಗ್ಗೆ ತಮಗೆ ಖಂಡಿತವಾಗಿಯೂ ಒಲವಿಲ್ಲ ಎಂಬುದನ್ನೂ ತಿಳಿಸಿದರು. ಆದರೆ ಕೆಲವರ ಒತ್ತಾಯದ ಮೇರೆಗೆ ಕೆಲವು ಶ್ಲೋಕಗಳನ್ನು ತಾವು ರಚಿಸಿರುವುದಾಗಿಯೂ, ಅವುಗಳನ್ನು ಒಂದಲ್ಲ ಒಂದು ಭಾಷೆಗೆ ಅನುವಾದ ಮಾಡಿರುವ ಉತ್ಸುಕರು ಆ ಅನುವಾದ ಸರಿಯಾಗಿದೆಯೇ ಎಂದು ತಮ್ಮನ್ನು ಆಗಾಗ ಬಂದು ಪೀಡಿಸುತ್ತಾರೆಂದೂ ತಿಳಿಸಿದರು.



"*ಸರ್ವಭೂತಹಿತೇ ರತಃ* "–ಬ್ರಹ್ಮಜ್ಞಾನಿಯಾದವನು ಸರ್ವಜೀವಿಗಳ ಹಿತದಲ್ಲಿ ತೊಡಗಿರುತ್ತಾನೆ.

ಹೀಗೆ ಮಹರ್ಷಿಗಳು ಬಹಳ ಮಟ್ಟಿಗೆ ಮೌನದಲ್ಲೇ ಕಾಲ ಕಳೆಯುತ್ತಾರೆ. ಜನ ಬಂದು ನಮಸ್ಕರಿಸಿ ಅವರ ಮುಂದೆ ಸ್ವಲ್ಪ ಹೊತ್ತು ಹಾಗೆಯೇ ಕುಳಿತಿದ್ದು ಹೊರಟುಹೋಗುತ್ತಾರೆ—ಪ್ರಾಯಶಃ ಒಂದೇ ಒಂದು ಮಾತಿನ ವಿನಿಮಯವೂ ಇಲ್ಲದೆ! ಇಂತಹ ಮೌನ ಉಪದೇಶದ ಪ್ರಯೋಜನ ಕುರಿತು ನನ್ನದೇ ಆದ ಸಂದೇಹಗಳಿವೆ. ಆದರೆ ಬಹಳ ದೂರದಿಂದ ಈ ರೀತಿಯ ಅದ್ಭುತವಾದ ಮೂಕ ವ್ಯಾಖ್ಯಾನವನ್ನು ಕೇಳಲು ಜನ ಬರುತ್ತಾರೆ, ಅಷ್ಟೇ ಅಲ್ಲ, **ಸಂತೃಪ್ತಿಯಿಂದ** ಹಿಂದಿರುಗುತ್ತಾರೆ ಕೂಡ.

ಅವರು ಬಹಳ ಕಡಮೆ ಮಾತನಾಡಿದರೂ ಅವರ ಮುಖಮುದ್ರೆಯನ್ನು ಅದರಲ್ಲೂ ಅವರ ಕಣ್ಣುಗಳನ್ನು ನೋಡುತ್ತಿರುವುದೇ ಒಂದು ವಿಶೇಷ ಅನುಭವ. ಮತ್ತೊಬ್ಬರನ್ನು ದಂಗುಬಡಿಸುವ ಅಂತಹ ಮೈಕಟ್ಟು ಅವರಿಗಿರಲಿಲ್ಲ. ಆದರೆ ಅವರ ಚುರುಕಾದ ಕಣ್ಣುಗಳಲ್ಲಿ ಚಿಮ್ಮುತ್ತಿದ್ದ ತೇಜಸ್ಸಿನ ಕಿರಣ, ವಿಶೇಷವಾದ ಸೌಮ್ಯತೆ ನೆಲೆಸಿದ್ದ ಆ ಮುಖಮುದ್ರೆ ಅನನ್ಯ. ಅವರ ದೇಹಭಂಗಿಯೂ ಅಷ್ಟೆ, ನಖಶಿಖಾಂತ ಯಾವುದೇ ವಿಕ್ಷಿಪ್ತತೆಯಿಲ್ಲದೆ ನಿಶ್ಚಲವಾಗಿರುತ್ತದೆ. ವಿಪರೀತ ಸೆಖೆಯಿಂದ ಬೆವರನ್ನು ಒರೆಸಿಕೊಳ್ಳಬಹುದು. ಯಾವಾಗಲಾದರೊಮ್ಮೆ ಅವರು ತಮ್ಮ ಭಂಗಿಯನ್ನು ಬದಲಾಯಿಸಿಕೊಳ್ಳಬಹುದು, ಅಷ್ಟೆ. ನಾನು ಅವರ ಮುಖವನ್ನು ಬಹಳ ಸೂಕ್ಷ್ಮವಾಗಿ ಗಮನಿಸುತ್ತಿದ್ದೆ: ಅವರ ಕಣ್ಣಿನ ರೆಪ್ಪೆಗಳು ಮಿಟುಕುತ್ತಿದ್ದುದಾಗಲಿ, ಅವರು ಆಕಳಿಸಿದ್ದಾಗಲೀ ನಾನು ನೋಡಿಲ್ಲವೆಂದೇ ಹೇಳಬೇಕು. ಮಹರ್ಷಿಗಳಲ್ಲಿ ನಾನು ಕಂಡ ಚಟುವಟಿಕೆಯಿಲ್ಲದ ಬದುಕು, ಜಡತೆಯಿಂದಾಗಲಿ, ತಮಸ್ಸಿನಿಂದಾಗಲೀ ಅಲ್ಲ ಎಂಬುದನ್ನು ನನ್ನ ಮಟ್ಟಿಗೆ ಸಾಕಷ್ಟು ತೃಪ್ತಿಕರವಾಗಿ ಕಂಡುಕೊಂಡಿದ್ದೇನೆ ಎಂಬುದನ್ನು ಸ್ಪಷ್ಟಪಡಿಸಲಷ್ಟೆ ನಾನು ಇವುಗಳನ್ನೆಲ್ಲ ಇಲ್ಲಿ ಬರೆಯುತ್ತಿದ್ದೇನೆ.

**"ಮನುಷ್ಯನು ಮರಣಹೊಂದಿದಾಗ ಇಡೀ ದೇಹವೇ ಸುಟ್ಟು ಬೂದಿಯಾಗುತ್ತದೆ. ಅನಂತರ ಉಳಿಯುವುದೇನು? – ಮನಸ್ಸು. ಪ್ರಶ್ನೆ ಹುಟ್ಟುತ್ತದೆ – ಹಾಗಾದರೆ ದೇಹದಲ್ಲಿ ಇದ್ದವರು ಎಷ್ಟು ಮಂದಿ? ಒಬ್ಬರೇ–ಇಬ್ಬರೇ? ಇಬ್ಬರಾದರೆ "ನಾನು" ಎಂದೇಕೆ ಹೇಳುತ್ತಾರೆ. "ನಾವು "ಎನ್ನಬೇಕಾಗಿತ್ತಲ್ಲವೇ? ಆದುದರಿಂದ ಇರುವವನು ಒಬ್ಬನೇ. ಅದು ಹುಟ್ಟಿದುದು ಯಾವಾಗ? ಎಲ್ಲಿಂದ? ಅದರ ಸ್ವರೂಪವೇನು? ಹೀಗೆ ಚಿಂತಿಸುತ್ತ ಹೋದಾಗ ಮನಸ್ಸೂ ನಾಶವಾಗುತ್ತದೆ. ನಂತರ ಉಳಿಯುವುದೇ ನಾನು ಎಂಬುದು. ಹಾಗಾದರೆ ನಾನು ಯಾರು? ಆತ್ಮವಲ್ಲದೆ ಬೇರೆಯಲ್ಲ. ಇದೇ ಧ್ಯಾನ. ನಾನು ಮಾಡಿದುದೇ ಹಾಗೆ."**

**– ಶ್ರೀರಮಣ ಮಹರ್ಷಿ (*ಶ್ರೀರಮಣ ಮಹರ್ಷಿಗಳೊಡನೆ ಮಾತುಕತೆ, ಪುಟ ೪೭*)**

ಮಹರ್ಷಿಗಳಲ್ಲಿ ನನ್ನನ್ನು ತಟ್ಟಿದ ಮೂರನೆಯ ಅಂಶ ವೆಂದರೆ, ಸ್ವ–ಪ್ರತಿಷ್ಠೆ, ಹಮ್ಮು ಬಿಮ್ಮುಗಳೆಲ್ಲ ಅವರಲ್ಲಿ ನಿರ್ವಿಶೇಷವಾಗಿ ನಾಶವಾಗಿದ್ದವು. ಅವರು ಧರಿಸಿದ್ದ ಕೌಪೀನ ದಿಂದಲ್ಲದೆ ಇವರೇ ರಮಣ ಮಹರ್ಷಿಗಳು ಎಂದು ಗುರು ತಿಸಲು ಆಗಂತುಕರಿಗೆ ಸಾಧ್ಯವಾಗುತ್ತಿರಲಿಲ್ಲ. ಇತರೆ ಎಲ್ಲರಿಗೂ ಬಡಿಸುವ ಆಹಾರವನ್ನೇ ಎಲ್ಲರೊಡನೆ ಕುಳಿತು ಅವರೂ ತೆಗೆದುಕೊಳ್ಳುತ್ತಾರೆ—ಅವರಿಗಾಗಿ ಯಾವುದೇ ವಿಶೇಷ ಖಾದ್ಯ ಇರುವುದಿಲ್ಲ. ಮಾತುಕತೆಯ ಮಧ್ಯದಲ್ಲಿ ಇತರೆ ವೇದಾಂತ ಸಾಧಕರು ತಮ್ಮನ್ನು ನಿರ್ದೇಶಿಸಿಕೊಳ್ಳಲು 'ಅವನು' 'ಅದು' ಎನ್ನುವಂತೆ ಈ ಮಹರ್ಷಿಗಳು ಆತ್ಮನೇಪದಿಯ ಬಳಕೆ ಯಿಂದ ತಮ್ಮನ್ನು ದೂರವಿರಿಸಿಕೊಳ್ಳುವ ಪರಿಪಾಠ ಇಟ್ಟು ಕೊಂಡಿಲ್ಲ. ಆಡಂಬರ, ಡಂಬಾಚಾರಗಳಿಂದ ರಹಿತವಾಗಿ ಮಹರ್ಷಿಗಳು ಎಷ್ಟು ಸ್ವಾಭಾವಿಕವಾಗಿದ್ದಾರೆ ಎಂಬುದರ ಕಡೆ ಗಮನ ಸೆಳೆಯಲು ನಾನಿದನ್ನು ಹೇಳುತ್ತಿದ್ದೇನೆ. ಅವರ ಮೌನವೂ ಸಹ ಜನರನ್ನು ದೂರದಲ್ಲಿಡುವ ನೆಪದಿಂದ ಅವರು ತೊಟ್ಟಿರುವ ಕೃತಕವಾದ ಶ್ರೀಮದ್ಗಾಂಭೀರ್ಯದ ಮುಖವಾಡವಲ್ಲ ಎಂಬುದು ನನಗೆ ಖಚಿತವಾಗಿದೆ. ಕಾರಣ, ಯಾವಾಗಲಾದರೊಮ್ಮೆ ಪ್ರಶ್ನಿಸಲ್ಪಟ್ಟಾಗ, ಅವರು ತಮ್ಮ ಮೌನ ವನ್ನು ಮುರಿಯುತ್ತಾರೆ. ಆಗ ಅವರ ಸುಮಧುರವಾದ ಹಾಗೂ ಅತ್ಯಂತ ಸ್ನೇಹಶೀಲವಾದ ವ್ಯಕ್ತಿತ್ವದ ಪರಿಚಯ ನಮಗಾಗುತ್ತದೆ.

ಮಹರ್ಷಿಗಳು ಸಮಾಜದಲ್ಲಿರುವ ಆಸ್ತಿ, ಅಂತಸ್ತುಗಳ ಆಧಾರದ ಮೇಲೆ ವ್ಯಕ್ತಿವ್ಯಕ್ತಿಗಳಲ್ಲಿ ಭೇದವನ್ನು ಎಣಿಸುವುದಿಲ್ಲ. ಬಡರೈತರಾಗಲಿ, ಕಾರುಗಳಲ್ಲಿ ಬರುವ ಶ್ರೀಮಂತರಾಗಲಿ ಇಬ್ಬರನ್ನೂ ಒಂದೇ ರೀತಿಯಾದ ಮೌನ ಸ್ವಾಗತಿಸುತ್ತದೆ. ಅವರೆಲ್ಲ ನೆಲದ ಮೇಲೆ ಕುಳಿತುಕೊಳ್ಳುತ್ತಾರೆ. ಆದರ, ಪ್ರೀತಿ, ವಿಶ್ವಾಸಗಳಿಂದ ತುಂಬಿದ ಆತಿಥ್ಯವನ್ನು ಎಲ್ಲರೂ ಸಮಾನ ವಾಗಿ ಪಡೆಯುತ್ತಾರೆ. ಹಾಗೆ ನೋಡಿದರೆ, ಶ್ರೀಮಂತರಿಗೆ ವಿಶೇಷವಾಗಿ ಮಣೆಹಾಕುವುದರಿಂದ ಆಶ್ರಮಕ್ಕೆ ಆಗಬಹುದಾದ ಆರ್ಥಿಕ ಲಾಭದ ಬಗ್ಗೆ ಮಹರ್ಷಿಗಳು ಸಂಪೂರ್ಣ ಉದಾಸೀನರೆಂದೇ ಹೇಳಬೇಕು.

ನಾನು ಆಶ್ರಮದಲ್ಲಿ ಮೂರು ದಿನಗಳಿದ್ದೆ. ನಾನು ಕೆಲವು ಪ್ರಶ್ನೆಗಳನ್ನು ಕೇಳಿದ್ದೆ. ನನ್ನ ಮೇಲೆ ಅತ್ಯಂತ ದಯೆತೋರಿ ನನ್ನೊಡನೆ ಮುಕ್ತವಾಗಿಯೇ ಮಾತನಾಡಿದರು. ಅವರ ಉತ್ತರಿಸಿದ ರೀತಿ ನಾನು ನಿರೀಕ್ಷಿಸಿದಷ್ಟು ನನ್ನನ್ನು ಸೂರೆ ಗೊಳ್ಳದಿದ್ದರೂ ಅವರ ವಿಚಾರಗಳು ಯಾವಾಗಲೂ ಸ್ಪಷ್ಟವೂ, ಸಂಕ್ಷಿಪ್ತವೂ ಹಾಗೂ ಎಲ್ಲ ಸಂಕುಚಿತ ಭಾವನೆಗಳಿಂದ ಮುಕ್ತವೂ ಆಗಿವೆ. ಯಾವುದೋ ಒಂದು ಸಂದರ್ಭದಲ್ಲಿ ಅವರೇ ನನಗೆ ತಿಳಿಸಿದಂತೆ ಅಷ್ಟೇನೂ ಗ್ರಂಥಗಳನ್ನು ಅವರು ಓದಿಲ್ಲದಿದ್ದರೂ ವೇದಾಂತದ ಎಲ್ಲ ಗಹನವಾದ ತತ್ತ್ವಗಳನ್ನೂ ಚೆನ್ನಾಗಿ ಗ್ರಹಿಸಿದ್ದಾರೆ. ಅವರನ್ನು ಕುರಿತು ನನಗನಿಸಿದ್ದು ಇಷ್ಟೆ: ಅವರು ಜ್ಞಾನಿಯೋ ಅಥವಾ ಇನ್ನೇನು ಎಂಬುದನ್ನು ಖಚಿತ ವಾಗಿ ಹೇಳಲು ಬರುವುದಿಲ್ಲ. ಆದರೆ ಅತ್ಯಂತ ಮಾಧುರ್ಯ ಹಾಗೂ ಪ್ರಸನ್ನತೆಯಿಂದ ತುಂಬಿರುವ ಅವರು ಎಲ್ಲರಿಗೂ ಪ್ರೀತಿಪಾತ್ರರು. ತಮ್ಮ ಸುಖ ಸೌಕರ್ಯಗಳ ಬಗ್ಗೆ ಸಂಪೂರ್ಣ ಉಪೇಕ್ಷೆಯಿಂದಿರುವ, ತಾವು ಸಾಧಿಸಿಕೊಳ್ಳಬೇಕಾದ ಯಾವ ಆಕಾಂಕ್ಷೆಯೂ ಇಲ್ಲದ, ಗಭೀರವಾದ ಆತ್ಮಭಾವದಲ್ಲಿ ಮುಳುಗಿಯೂ ಸದಾ ಎಚ್ಚರದಿಂದಿರುವ, ಎಲ್ಲ ಆಸೆ ಆಡಂಬರ ಗಳಿಂದ ಸಂಪೂರ್ಣ ಮುಕ್ತರಾದ ಒಂದು ಅನನ್ಯವಾದ ಮಹಾಚೇತನವನ್ನು ನೋಡಿದ್ದೇನೆಂಬ ನಂಬಿಕೆ ನನಗಿದೆ. ✪

## ಆಶ್ರಮದ ವಿಶೇಷ ಉತ್ಸವದ ದಿನಗಳು

**ಫೆಬ್ರವರಿ ೨೦೦೬**

| | | |
|---|---|---|
| ೦೧ | ಸ್ವಾಮಿ ತ್ರಿಗುಣಾತೀತಾನಂದ ಜಯಂತಿ | ಬುಧವಾರ |
| ೦೮ | ಏಕಾದಶಿ | ಬುಧವಾರ |
| ೧೩ | ಸ್ವಾಮಿ ಅದ್ಭುತಾನಂದ ಜಯಂತಿ | ಸೋಮವಾರ |
| ೨೪ | ಏಕಾದಶಿ | ಶುಕ್ರವಾರ |
| ೨೬ | ಮಹಾ ಶಿವರಾತ್ರಿ | ಭಾನುವಾರ |

**ಪ್ರತಿ ಗುರುವಾರ ಮತ್ತು ಭಾನುವಾರಗಳಂದು ಕನ್ನಡದಲ್ಲಿಯೂ ಪ್ರತಿ ಶನಿವಾರದಂದು ಇಂಗ್ಲಿಷಿನಲ್ಲಿಯೂ ಸಂಜೆ ೬ ರಿಂದ ೭ರವರೆಗೆ ಆಶ್ರಮದ ಸಭಾಂಗಣದಲ್ಲಿ ಪ್ರವಚನಗಳು ನಡೆಯುತ್ತವೆ**